**ಕ್ರಿಮಿನಲ್ ಮೀಸ್ 111/2023**
**ಪಿ.ಡಬ್ಲ್ಯೂ: 01**

**<u>ದಿನಾಂಕ: 13.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಎದುರದಾರರ ಪರ ಶ್ರೀ.ಐ.ಎಸ್.ಸಿ. ವಕೀಲರಿಂದ:</u>**

1. ನಾನು ನನ್ನ ಗಂಡನ ಮನೆಯಲ್ಲಿ 2 ವರ್ಷ ವಾಸವಾಗಿದ್ದೇನು. ಎದುರುದಾರನಿಗೆ ಮೊದಲಿನಿಂದಲು ಚಟ ಇದ್ದು, ಮುಂದೆ ಸುಧಾರಿಸುತ್ತಾನೆ ಎಂದು ಹೇಳಿ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಮಾವನಿಗೆ 3 ಜನ ಅಣ್ಣ-ತಮ್ಮಂದಿರು, ಅವರಲ್ಲಿ ಇಬ್ಬರು ತೀರಿಕೊಂಡಿರುತ್ತಾರೆ. ಸರ್ವೆ ನಂ.388/1 ಮತ್ತು 409/6 ನನ್ನ ಗಂಡನ ಹೆಸರಿನಲ್ಲಿ ಇಲ್ಲ ಎಂದರೆ ಸರಿ, ನನ್ನ ಮಾವನ ಹೆಸರಿನಲ್ಲಿ ಇರುತ್ತದೆ. ನನ್ನ ಮಾವನ ಹೆಸರು ಬಸಪ್ಪ. ನನಗೆ ಟೇಲರಿಂಗ್ ಬರುವುದಿಲ್ಲ. ನಾನು ಏನು ಕೆಲಸ ಮಾಡಿಕೊಂಡಿರುವುದಿಲ್ಲ, ಗೃಹಿಣಿ ಆಗಿರುತ್ತೇನೆ. ನನಗೆ ಟೇಲರಿಂಗ್ ಕೆಲಸ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮದುವೆ ದಿ: 16.05.2016 ರಂದು ಆಗಿರುತ್ತದೆ. ನಾನು ನನ್ನ ತವರುಮನೆಯಲ್ಲಿ 3 ವರ್ಷಗಳಿಂದ ವಾಸವಾಗಿರುತ್ತೇನೆ. ನನ್ನ ಗಂಡ ತಾನು ಕೆಲಸ ಮಾಡುತ್ತಿರುವಾಗ ತಾನು ಆಯಿತು ತನ್ನ ಕೆಲಸ ಆಯಿತು ಎಂದು ಇರುತ್ತಿದ್ದನು ಎಂದರೆ ಸರಿ. ನನ್ನ ಗಂಡ ಪ್ರತಿದಿನ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿ. ನನ್ನ ಗಂಡ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದ ಎಂದರೆ ಸರಿಯಲ್ಲ. ಮದುವೆ ನಂತರ ರಾತ್ರಿ 10-00 ರಿಂದ 11-00 ಸಮಯದಲ್ಲಿ ಬರುತ್ತಿದ್ದನ್ನು. ನನ್ನ ಗಂಡನ ಮನೆಯವರು ನಮ್ಮ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿ.

3. ಪಂಚಾಯಿತಿ ಮಾಡಿದಾಗ ಹಿರಿಯರನ್ನು ಕರೆದುಕೊಂಡು ಹೋಗಿ ಬುದ್ಧಿವಾದ ಹೇಳಿರುತ್ತೇವೆ ಎಂದು ಅರ್ಜಿಯಲ್ಲಿ ನಮೂದಿಸಿದ್ದು, ಹಿರಿಯರ ಹೆಸರು ಕೇಳಿದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮದುವೆಯಾಗಿ ಒಂದು ಮಗು ಜನಿಸಿದ ನಂತರ ಎದುರುದಾರನು ನೀನು ನನಗೆ ಬೇಡ ನನಗೆ ಡಿವೈರಸ್ ಕೋಡು ಎಂದು ಕೇಳುತ್ತಿದ್ದನು.

4. ಮದುವೆಯಾದ 2 ವರ್ಷಗಳ ನಂತರ ಮಗು ಜನಿಸಿರುತ್ತದೆ. ನಾನು ನನ್ನ ಗಂಡನ ಜೊತೆ ಜೀವನ ಸಾಗಿಸುತ್ತೇನೆ ಎಂದು ಅರ್ಜಿ ಸಲಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಎದುರುದಾರನು 2 ನೇ ಮದುವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತವರುಮನೆಯ ಊರಿನವರು ಮದುವೆ ಹೋದಾಗ ಎದುರುದಾರನ 2 ನೇ ಮದುವೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಮಲ್ಲಪ್ಪ ದಳವಾಯಿ ರವರು ತಿಳಿಸಿರುತ್ತಾರೆ. ನನ್ನ ಗಂಡನ ಜೊತೆ ವಾಸವಾಗಲು ಇಷ್ಟವಿಲ್ಲದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ನನ್ನ ಗಂಡನ ಮನೆಯಲ್ಲಿ ಇದ್ದಾಗ ನಾನು, ನನ್ನ ಗಂಡ, ನನ್ನ ಅತ್ತೆ-ಮಾವ ಮತ್ತು ನಾದನಿ, ನನ್ನ ಮೈದುನ ಮತ್ತು ಆತನ ಹೆಂಡತಿ ಇದ್ದರು. ನನ್ನ ಗಂಡನಿಗೆ ತನ್ನ ತಂದೆ-ತಾಯಿಯನ್ನು ನೋಡಿಕೊಳ್ಳುವ ಜವಬ್ದಾರಿ ಇರುತ್ತದೆ ಎಂದರೆ ಸರಿ. ನಾನು ನನ್ನ ಗಂಡನಿಗೆ ಬೇರೆ ಮನೆ ಮಾಡಿಕೊಂಡು ವಾಸವಾಗಿರೋನ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಗೆ ನನ್ನ ಅತ್ತೆ ಮಾವನನ್ನು ನೋಡಿಕೊಳ್ಳುವುದು ಬೇಡ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

6. ನನ್ನ ಗಂಡಮನೆಯಿಂದ ನನ್ನ ತವರುಮನೆ ಎಷ್ಟು ಕಿ.ಮೀ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡಮನೆಯಿಂದ ನನ್ನ ತವರುಮನೆ 18 ಕಿ.ಮೀ ಅಂತರ ಇರುವ ಕಾರಣ ಹೋಗುವುದು ಬರುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಕುಡಿದು ಬಡಿಯುವುದು ಮಾಡಿರುವುದರಿಂದ ಪೊಲೀಸ್ ಠಾಣೆಗೆ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡ ಯಾವುದೇ ಶಾಲೆ ಕಲಿತಿರುವುದಿಲ್ಲ. ನನ್ನ ಗಂಡ ಓ.ಸಿ. ಆಡುತ್ತಿದ್ದ ಎಂದು ನನ್ನ ಅರ್ಜಿಯಲ್ಲಿ ನಮೂದಿಸಿದ್ದು, ಓ.ಸಿ. ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಇಸ್ಪಿಟ್ ಆಡುತ್ತಾನೆ ಎಂದು ಬರೆಸಿರುತ್ತೇನೆ, ಓ.ಸಿ. ಎಂದು ಬರೆಸಿರುವುದಿಲ್ಲ. ಅರ್ಜಿಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ತಂದೆ-ತಾಯಿಯವರು ಕಲ್ಲಿನ ಕಡಿಯ ವ್ಯಾಪರ ಮಾಡುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)
ದಿವಾಣಿ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.